ಇಂದು ದಿನಾಂಕಃ 20.02.2020 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**<u>ಪಾಟೀ ಸವಾಲುಃ</u>** ಪ್ರತಿವಾದಿಯ ಪರ ಶ್ರೀ ಎಂ ಬಿ ಪಿ ವಕೀಲರಿಂದಃ

1. ನಾನು ಮತ್ತು ಪ್ರತಿವಾದಿಯರು ಸಂಬಂಧಿಕರು ಎಂದರೆ ಸರಿ. ವಾದಿಯರ ಮತ್ತು ಪ್ರತಿವಾದಿಯರ ನಡುವೆ ಮೊದಲು ಕ್ರಿಮಿನಲ್ ಮೊಕ್ಕದ್ದಮೆಗಳು ಇದ್ದವು ಎಂದರೆ ಸರಿ. ನಾನವು ಮತ್ತು ಪ್ರತಿವಾದಿಯರ ನಡುವೆ ಮಾತುಕತೆಗಳು ಇರುವುದಿಲ್ಲ ಎಂದರೆ ಸರಿ. ನನ್ನ ತಾತ ಕರಬಸಪ್ಪ ಮತ್ತು ಪ್ರತಿವಾದಿಯರ ತಾತ ಮಲ್ಲೆಶಪ್ಪ ಅಣ್ಣತಮ್ಮಂದಿರು ಎಂದರೆ ಸರಿ. ನನ್ನ ತಾತ ಕರಬಸಪ್ಪ ಅವರಿಗೆ ವೀರಪ್ಪ, ಕಮಲಮ್ಮ ಮತ್ತು ಪಾರವ್ವ ಎಂಬ 3 ಜನ ಮಕ್ಕಳು ಎಂದರೆ ಸರಿ. ಪಾರವ್ವ ಮರಣ ಹೊಂದಿದ್ದಾರೆ ಎಂದರೆ ಸರಿ. ಆಕೆಗೆ ಪುಷ್ಪಾ ಮತ್ತು ಅನ್ನಪೂರ್ಣಮ್ಮ ಎಂಬುವ ಮಕ್ಕಳು ಇದ್ದಾರೆ ಎಂದರೆ ಸರಿ.

2. ನಾನು ಹಾಜರು ಮಾಡಿರುವ ವಂಶಾವಳಿಯಲ್ಲಿ ಕರಬಸಪ್ಪ ಅವರಿಗೆ ವೀರಪ್ಪ ಒಬ್ಬನೆ ಮಗ ಎಂದು ತೋರಿಸಿದ್ದೇವೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ನಾನು ಕಮಲಮ್ಮ ಮತ್ತು ಪಾರವ್ವನ ಮಕ್ಕಳನ್ನು ಸೇರಿಸಿದ್ದೇನೆ. ಸದರಿಯವರನ್ನು ಪಕ್ಷಕಾರರನ್ನಾಗಿ ಮಾಡದಿದ್ದರು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ವಕೀಲರು ಸಾಕ್ಷಿಗೆ ಒಂದು ಛಾಯಾ ಚಿತ್ರವನ್ನು ತೋರಿಸಿ ಹುಲ್ಲಿನ ಬಣವೆಯನ್ನು ಹಾಕಿರುವ ಜಾಗವು ದಾವಾ ಆಸ್ತಿ ಆಗಿರುತ್ತದೆ ಎಂದು ಸೂಚಿಸಿದ್ದು, ಸಾಕ್ಷಿಯು ಅದನ್ನು ಒಪ್ಪಿಕೊಂಡಿರುತ್ತಾರೆ, ಆದ್ದರಿಂದ ಸದರಿ ಛಾಯಾ ಚಿತ್ರವನ್ನು ನಿಡಿ-1 ಎಂದು ಗುರುತಿಸಲಾಯಿತು. ನನ್ನ ತಾತ ಮತ್ತು ಆತನ ಸಹೋದರ ಮಲ್ಲೆಶಪ್ಪ ಅವರ ಆಪ್ ಸಾತ್ ಹಿಸ್ಸೆಯನ್ನು ಮಾಡಿಕೊಂಡ ಆಧಾರದ ಮೇಲೆ ಮಲ್ಲೇಶಪ್ಪನ ಮೊಮ್ಮಗ 1 ನೇ ಪ್ರತಿವಾದಿಯು ನಿಡಿ-1 ರಲ್ಲಿ ಕಾಣುವ ಆಸ್ತಿಯಲ್ಲಿ ವಹಿವಾಟು ಮಾಡುತ್ತಿರುತ್ತಾನೆ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ನಾನೇ ಹುಲ್ಲಿನ ಬಣವೆ ಮತ್ತು ತಿಪ್ಪೆಯನ್ನು ಹಾಕಿಕೊಂಡು ನಾವೇ ವಹಿವಾಟು ಮಾಡುತ್ತಿದ್ದೇನೆ ಎಂದು ನುಡಿಯುತ್ತಿದ್ದಾರೆ. ನಾನು ಸದರಿ ತಿಪ್ಪೆ ಮತ್ತು ಬಣವೆಯನ್ನು 1 ನೇ ಪ್ರತಿವಾದಿಯಗೆ ಸೇರಿದ ಆಸ್ತಿಯ ಉತ್ತರ ದಿಕ್ಕಿಗೆ ಹಾಕಿಕೊಂಡು ವಹಿವಾಟು ಮಾಡುತ್ತಿದ್ದೇನೆ.

4. ದಾವಾ ಆಸ್ತಿಯನ್ನು ನನ್ನ ತಾತ ಕರಬಸಪ್ಪ ಮತ್ತು ಆತನ ಸಹೋದರ ಮಲ್ಲೇಶಪ್ಪ ಅವರು ಹಿಸ್ಸೆ ಮಾಡಿಕೊಂಡ ನಂತರ ಮಲ್ಲೇಶಪ್ಪನ ಮಕ್ಕಳಾದ ಹನುಮಂತಪ್ಪ ಮತ್ತು 3 ಹಾಗೂ 4 ನೇ ಪ್ರತಿವಾದಿಯರ ಹೆಸರು 1993-94 ನೇ ಇಸ್ವಿಯಿಂದಲೂ ದಾವಾ ಆಸ್ತಿಗೆ ಪಂಚಾಯತಿ

ದಾಖಲೆಗಳು ಮುಂದುವರೆದಿರುತ್ತವೆ ಎಂದರೆ ಸಾಕ್ಷಿಯು ಸದರಿ ದಾಖಲೆಗಳನ್ನು ಯಾವುದೇ ಆಧಾರವಿಲ್ಲದೆ ನಮಗೆ ಗೊತ್ತಿಲ್ಲದ ರೀತಿಯಲ್ಲಿ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಮಲ್ಲೇಶಪ್ಪನ ಮಕ್ಕಳು ಸದರಿ ದಾಖಲೆಗಳನ್ನು ಮೋಸದಿಂದ ಮಾಡಿಸಿಕೊಂಡಿದ್ದಾರೆ ಎಂದು ನನಗೆ 2016 ನೇ ಇಸ್ವಿಯಲ್ಲಿ ಗೊತ್ತಾಗಿರುತ್ತದೆ.

5. ನಿಪಿ-5 ರಲ್ಲಿ ಇರುವ ಸಹಿಯು ನನ್ನ ತಾತ ಕರಬಸಪ್ಪ ಅವರ ಸಹಿ ಇರುವುದಿಲ್ಲ. ನಮ್ಮ ತಾತ ಸದರಿ ನಿಪಿ-5 ರ ದಾಖಲಾತಿಯನ್ನು ಬರೆದು ಗ್ರಾಮ ಪಂಚಾಯತಿಗೆ ಸಹಿ ಮಾಡಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-5 ಆಧಾರದ ಮೇಲೆ ಗ್ರಾಮ ಪಂಚಾಯತಿಯವರು ನಿಪಿ-4 ರಂತೆ ಠರಾವು ಆದೇಶವನ್ನು ಮಾಡಿ ಖಾತೆ ಬದಲಾವಣೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಯರ ತಂದೆ ಹನುಮಂತಪ್ಪ ಅವರು 1999 ನೇ ಇಸ್ವಿಯಲ್ಲಿ ಮರಣ ಹೊಂದಿರುತ್ತಾರೆ ಎಂದರೆ ಸರಿ. ದಾವಾ ಆಸ್ತಿಯನ್ನು ಹನುಮಂತಪ್ಪ ತೀರಿ ಹೋದ ನಂತರ 1 ಮತ್ತು 2 ನೇ ಪ್ರತಿವಾದಿಗಳು ವಹಿವಾಟು ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯು ಅವರೊಂದಿಗೆ ನಾವು ಕೂಡಾ ಜಂಟಿ ವಹಿವಾಟು ಮಾಾಡುತ್ತಿದ್ದೇವೆ ಎಂದು ನುಡಿಯುತ್ತಾರೆ. ಆ ರೀತಿ ಜಂಟಿ ವಹಿವಾಟು ಮಾಡುತ್ತಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ಇತರ ವಾದಿಯರು ಮೊದಲಿದಿಂದಲೂ ಹಾಗೂ ಈಗಲೂ ಕಬ್ಜಾದಲ್ಲಿ ಇರುವುದಿಲ್ಲ ಹಾಗೂ ವಹಿವಾಟು ಮಾಡುತ್ತಿರುವುದಿಲ್ಲ ಎಂದರೆ ಸರಿಯಲ್ಲ.

6. ವಿ ಪಿ ಸಿ ಆಸ್ತಿ ನಂ. 235/ಎ ಆಸ್ತಿಯು ನನ್ನ ಹೆಸರಿಗೆ ಇದ್ದು, ಅದು ಮೂಲತಃ 1 ಮತ್ತು 2 ನೇ ಪ್ರತಿವಾದಿಗಳ ತಾತರಾದ ಮಲ್ಲೇಶಪ್ಪ ಹಾಗೂ ನನ್ನ ತಾತ ಕರಬಸಪ್ಪ ಅವರು ಜಂಟಿಯಾಗಿ ಖರೀದಿಸಿದ ಆಸ್ತಿ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ನನ್ನ ತಾತ ಒಬ್ಬರೇ ಖರಿದಿ ಹಿಡಿದ ಆಸ್ತಿ ಎಂದು ನುಡಿಯುತ್ತಾರೆ. ಸದರಿ ಆಸ್ತಿಯು ಜಂಟಿಯಾಗಿ ಖರೀದಿ ಹಿಡಿದ ಆಸ್ತಿಯಾಗಿದ್ದು ನಾನು ನನ್ನ ತಾತ ಒಬ್ಬರೆ ಖರೀದಿ ಹಿಡಿದ ಆಸ್ತಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ರೀತಿ ಸದರಿ ಆಸ್ತಿಯನ್ನು ನನ್ನ ತಾತ ಮತ್ತು ಮಲ್ಲೇಶಪ್ಪ ಅವರು ಜಂಟಿಯಾಗಿ ಖರೀದಿ ಹಿಡಿದಿದ್ದರಿಂದ ಸದರಿ ಆಸ್ತಿಯನ್ನು ತನ್ನ ಹೆಸರಿಗೆ ಉಳಿಸಿಕೊಂಡು ದಾವಾ ಆಸ್ತಿಯನ್ನು ಕರಬಸಪ್ಪ ಅವರು ಮಲ್ಲೇಶಪ್ಪ ಅವರಿಗೆ ಬಿಟ್ಟುಕೊಂಟ್ಟಿರುತ್ತಾರೆ ಎಂದರೆ ಸರಿಯಲ್ಲ. ಆಸ್ತಿ ನಂ. 235/ಎ ನ್ನು ನನ್ನ ತಾತ ಇಟ್ಟುಕೊಂಡು ದಾವಾ ಆಸ್ತಿಯನ್ನು ಮಲ್ಲೇಶಪ್ಪ ಅವರ ಮಕ್ಕಳಾದ ಹನುಮಂತಪ್ಪ , ಸಿದ್ದಪ್ಪ ಮತ್ತು ಹಾಲಪ್ಪ ಅವರಿಗೆ ಬಿಟ್ಟುಕೊಟ್ಟಿದ್ದು ಅದರಂತೆ 1 ರಿಂದ 4 ನೇ ಪ್ರತಿವಾದಿಗಳು ದಾವಾ ಆಸ್ತಿಯನ್ನು ಕಬ್ಜಾದಲ್ಲಿ ಇಟ್ಟು ಕೊಂಡು ವಹಿವಾಟು ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ.

7. ನಾನು ಹಾಜರು ಮಾಡಿರುವ ಹಾತ್ ನಕಾಶೆಯಲ್ಲಿ ಹುಲ್ಲಿನ ಬಣವೆ ಮತ್ತು ತಿಪ್ಪೆಯನ್ನು ಹಾಕಿರುವುದನ್ನು ತೋರಿಸಿದ್ದೇನೆ. ನಾನು ದಾವೆಯ ಸಮನ್ಸನ್ನು ಪ್ರತಿವಾದಿ 4 ವರಿಗೆ ತೆಗೆದುಕೊಂಡಿರುತ್ತೇನೆ. ಪ್ರತಿವಾದಿ 4 ರವರಿಗೆ ದಾವೆಯ ಸಮನ್ಸನ್ನು ಕಳುಹಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಮಲ್ಲೇಶಪ್ಪನ ವಾರಸುದಾರರಾದ ಪ್ರತಿವಾದಿಗಳು 1993-94 ನೇ ಇಸ್ವಿಯಿಂದಲೂ ವಹಿವಾಟು ಮಾಡುತ್ತಿರುವ ವಿಚಾರ ತಿಳಿದಿದ್ದರು ಸಹ 12 ವರ್ಷಗಳಲ್ಲಿ ನಾನು ದಾವೆಯನ್ನು ಸಲ್ಲಿಸದೆ ಇರುವ ಕಾರಣದಿಂದ ನನ್ನ ದಾವೆ ಉರ್ಜಿತವಲ್ಲ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ಪ್ರತಿವಾದಿಗಳು ಮೋಸದಿಂದ ಮಾಡಿಸಿಕೊಂಡ ಖಾತೆಗಳು ನನಗೆ 2016 ರಲ್ಲಿ ತಿಳಿದು ಬಂದಿರುತ್ತದೆ ಎಂದು ನುಡಿಯುತ್ತಾರೆ. ನನಗೂ , ಇತರ ವಾದಿಗಳು ಪ್ರತಿವಾದಿಗಳೊಂದಿಗೆ ಸಂಬಂಧ ಚೆನ್ನಾಗಿ ಇಲ್ಲದೇ ಇರವುದರಿಂದ ದಾವಾ ಆಸ್ತಿಯನ್ನು ಎತ್ತಿ ಹಾಕುವ ಉದ್ದೇಶದಿಂದ ಸುಳ್ಳು ಕಾರಣ ನೀಡಿ ಈ ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ನಾನು ಮತ್ತು ಇತರ ವಾದಿಯರು ವಹಿವಾಟು ಮಾಡುತ್ತಾ ಬಂದಿರುತ್ತೇವೆ ಅದಕ್ಕೆ ಪ್ರತಿವಾದಿಯರು ತೊಂದರೆ ನೀಡುತ್ತಿದ್ದಾರೆ ಎಂದು ಹೇಳಿ ಈ ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ದಾವಾ ಆಸ್ತಿಯನ್ನು ಮೊದಲಿನಿಂದಲೂ ಕಬ್ಜಾದಲ್ಲಿ ಇಟ್ಟುಕೊಂಡು ವಹಿವಾಟು ಮಾಡುತ್ತಿರುವುದರಿಂದ ನಮ್ಮ ಸ್ವಾಧೀನಕ್ಕೆ ತೊಂದರೆ ಕೊಡುವ ಪ್ರಶ್ನೆ ಇಲ್ಲ ಎಂದರೆ ಸಾಕ್ಷಿಯು ನನ್ನ ಮತ್ತು ವಾದಿಯರ ವಹಿವಾಟಿಯಲ್ಲಿ ಇದೆ ಎಂದು ನುಡಿಯುತ್ತಾರೆ. ನನ್ನ ಹಸ್ತ ನಕ್ಷೆಯಲ್ಲಿ ಹೇಳಿರುವಂತೆ ಎ,ಬಿ , ಸಿ ,ಡಿ ಜಾಗವನ್ನು ನಾನು ಮತ್ತು ಇತರ ವಾದಿಯರು ಮತ್ತು ಸಿ, ಡಿ , ಇ , ಎಫ್ ಆಸ್ತಿಯನ್ನು ಪ್ರತಿವಾದಿಯರು ವಹಿವಾಟು ಮಾಡುತ್ತಿದ್ದಾರೆ ಎಂದು ಸುಳ್ಳು ಬರೆಸಿದ್ದೇನೆ ಎಂದರೆ ಸರಿಯಲ್ಲ. ಸದರಿ ಎ , ಬಿ , ಇ, ಎಫ್ ಆಸ್ತಿಯು ಸಂಪೂರ್ಣ ಪ್ರತಿವಾದಿಯರ ಸ್ವಾಧೀ ನದಲ್ಲಿ ಇದೆ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ನಾವು ಮತ್ತು ಪ್ರತಿವಾದಿಯರು ಜಂಟಿ ಸ್ವಾಧೀನದಲ್ಲಿ ಇದ್ದೇವೆ ಎಂದು ನುಡಿಯುತ್ತಾರೆ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ
Sd/-xx

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.